1	2	3	4	5	6	7
28	ಚಿಕ್ಕಬಳ್ಳಾಪುರ	36,000	20,000	48,000	2,35,000	3,39,000
29	ಕೋಲಾರ	36,000	20,000	48,000	2,35,000	3,39,000
30	ಯಾದಗಿರಿ	36,000	20,000	24,000	2,35,000	3,15,000
	ಒಟ್ಟು	**10,80,000**	**6,00,000**	**6,24,000**	**44,65,000**	**67,69,000**

ಕನ್ನಡದ ಅಭಿವೃದ್ಧಿ

46(149) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರವು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ಈಗಾಗಲೇ ನೀಡಿದ್ದು, ರಾಜ್ಯ ಸರ್ಕಾರವು ಈ ದಿಶೆಯಲ್ಲಿ ಭಾಷೆಯ ಅಭಿವೃದ್ಧಿಗಾಗಿ ಯಾವ ಯಾವ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದೆ. (ಪೂರ್ಣ ವಿವರಗಳನ್ನು ನೀಡುವುದು)

ಆ) ಇದಕ್ಕಾಗಿ ರಾಜ್ಯ ಸರ್ಕಾರವು ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಿದೆ;

ಇ) ಈ ದಿಶೆಯಲ್ಲಿ ರಾಜ್ಯ ಗಡಿ ಭಾಗದಲ್ಲಿರುವ ಬೀದರ್ ಜಿಲ್ಲೆಯಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು)

ಅ) ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವ ಹಿನ್ನೆಲೆಯಲ್ಲಿ ಕನ್ನಡದ ಸರ್ವಾಂಗೀಣ ಅಭಿವೃದ್ಧಿಗಾಗಿ ಯೋಜನೆಯಡಿ ರಾಜ್ಯದ 11 ವಿಶ್ವವಿದ್ಯಾಲಯಗಳ ಮೂಲಕ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕನ್ನಡ ಸರ್ವಾಂಗೀಣ ಅಭಿವೃದ್ಧಿಗಾಗಿ 2009–10ನೇ ಸಾಲಿನಲ್ಲಿ 11 ವಿಶ್ವವಿದ್ಯಾಲಯಗಳಿಗೆ ತಲಾ ರೂ. 1.00 ಕೋಟಿಯಂತೆ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಒಟ್ಟು ರೂ. 11.00 ಕೋಟಿಯನ್ನು ಬಿಡುಗಡೆ ಮಾಡಿದೆ. ವಿವರ ಈ ಕೆಳಕಂಡಂತಿದೆ.

1) ಮೈಸೂರು ವಿಶ್ವವಿದ್ಯಾಲಯ
2) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
3) ಬಿಜಾಪುರ ಮಹಿಳಾ ವಿಶ್ವವಿದ್ಯಾಲಯ
4) ಕುವೆಂಪು ವಿಶ್ವವಿದ್ಯಾಲಯ, ಶಂಕರ ಘಟ್ಟ
5) ಗುಲ್ಬರ್ಗಾ ವಿಶ್ವವಿದ್ಯಾಲಯ
6) ಮಂಗಳೂರು ವಿಶ್ವವಿದ್ಯಾಲಯ
7) ಬೆಂಗಳೂರು ವಿಶ್ವವಿದ್ಯಾಲಯ
8) ಕನ್ನಡ ಹಂಪಿ ವಿಶ್ವವಿದ್ಯಾಲಯ
9) ತುಮಕೂರು ವಿಶ್ವವಿದ್ಯಾಲಯ
10) ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
11) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

2010–11ನೇ ಸಾಲಿನಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ–ಭಾಷೆ ಅಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 51 ಕಸನಿ 2010, ಬೆಂಗಳೂರು, 8–2–2011ರಲ್ಲಿ ರೂ. 3.32 ಕೋಟಿಗಳ ಅನುದಾನ ಒದಗಿಸಿದ ವಿವರ ಈ ಕೆಳಕಂಡಂತಿವೆ.

1) ವಿಶ್ವವಿದ್ಯಾಲಯಗಳಿಗೆ ವಿಶ್ವವಿದ್ಯಾಲಯಗಳ ಶಾಸ್ತ್ರೀಯ ಭಾಷೆ ಅಭಿವೃದ್ಧಿಗಾಗಿ ಅನುದಾನ ರೂ. 3.00 ಕೋಟಿ

2) ರಾಜ್ಯದ ಸಮಗ್ರ ಅಭಿವೃದ್ಧಿ ಯೋಜನೆಯಡಿ ಕನ್ನಡ ಕಾನೂನು ಕಾರ್ಯಕ್ರಮ, ಬದುಕಿನ ಸುತ್ತ ಕಾನೂನಿನ ಹುತ್ತ, ಕಾನೂನು ಕಟ್ಟೆ, ನಮ್ಮ ಶಕ್ತಿ ರೂ. 0.32 ಲಕ್ಷ

ಇ) ಕನ್ನಡ ಭಾಷೆ ಅಭಿವೃದ್ಧಿಗಾಗಿ ರೂಪಿಸಲಾಗಿರುವ ಯೋಜನೆಗಳು ಈ ಕೆಳಕಂಡಂತಿವೆ.

1) ಆಡಳಿತದಲ್ಲಿ ಕನ್ನಡ ಕಾರ್ಯ ಶಿಬಿರ

2) ಕನ್ನಡೇತರಿಗಾಗಿ ಕನ್ನಡ ಕಲಿಕಾ ತರಗತಿ

3) ಗಡಿ ತಾಲ್ಲೂಕುಗಳಿಗಾಗಿ ಕನ್ನಡ ಜಾಗ್ರತಿ ಸಮಾವೇಶ

4) ಗಡಿ ಉತ್ಸವ

5) ಭಾಷಾ ಕಮ್ಮಟ

ಅನುಬಂಧ

ಈ ಕೆಳಕಂಡ 11 ವಿಶ್ವವಿದ್ಯಾಲಯಗಳ ಕಾರ್ಯ ಯೋಜನೆಗಳ ವಿವರಗಳು

1) ಮೈಸೂರು ವಿಶ್ವವಿದ್ಯಾಲಯ

ಅ) ಕರ್ನಾಟಕದ ಅರಸು ಮನೆತನಗಳ ಶಾಸನ ಸಂಪುಟಗಳು

ಆ) ಪ್ರಾಚೀನ ಕನ್ನಡ ಹಸ್ತ ಪ್ರತಿಗಳ ಸಂರಕ್ಷಣೆ, ದಾಖಲೀಕರಣ ಮತ್ತು ಗಣಕೀಕರಣ

ಇ) ಕನ್ನಡ ವಿಶ್ವಕೋಶಗಳಲ್ಲಿ ಪ್ರಕಟವಾದ ಲೇಖನಗಳ ವಿಷಯವಾರು ಗ್ರಂಥಗಳ ಪ್ರಕಟಣೆ

ಈ) ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟದ ಕ್ರಿಯಾಯೋಜನೆ

ಉ) ಸಾಹಿತ್ಯ ಚಿಂತನೆಗಳ ಪಾರಿಭಾಷಿಕ ಪದವಿವರಣ ಕೋಶ

ಊ) ಕನ್ನಡದಲ್ಲಿ ಅನ್ಯಬಾಷಿಕ ಪದಗಳ ನಿವೃತ್ತಿಯ ಕೋಶ

2) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅ) ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಪ್ರಕಟಣೆ ಸೂಚಿ ಸಿದ್ದಪಡಿಸುವುದು

ಆ) ಕನ್ನಡ ಸಂಶೋಧನೆ ವಿಷಯ ಕೋಶ

ಇ) ಉಪಭಾಷಾ ನಿಘಂಟುಗಳ ರಚನೆ

ಈ) ವಿಶ್ವವಿದ್ಯಾಲಯ ಆಡಳಿತ ಪಾರಿಭಾಷಿಕ ಕೋಶ

3) ಬಿಜಾಪುರ ಮಹಿಳಾ ವಿಶ್ವವಿದ್ಯಾಲಯ

ಅ) ಮಹಿಳಾ ಉಲ್ಲೇಖವಿರುವ ಶಾಸನಗಳು ಪುರಾಣ ಗ್ರಂಥಗಳು, ಹಸ್ತ ಪ್ರತಿಗಳು, ಐತಿಹ್ಯಗಳ ಸಂಗ್ರಹ

ಅ) ರಾಣಿಯರ ವಸ್ತುಗಳ ಸಂಗ್ರಹ, ಉಡುಗೆ–ತೊಡುಗೆಗಳ ಸಂಗ್ರಹ, ಅಡುಗೆ ಸಲಕರಣೆಗಳ ಸಂಗ್ರಹ

4) ಕುವೆಂಪು ವಿಶ್ವವಿದ್ಯಾಲಯ ಶಂಕರ ಘಟ್ಟ

ಅ) ಕುವೆಂಪು ಸಾಹಿತ್ಯ ಪದಕೋಶ (6 ಸಂಪುಟಗಳ ಮುದ್ರಣ)

ಆ) ಬುಡಕಟ್ಟುಗಳ ದಾಖಲಾತಿ ಮತ್ತು ಅಧ್ಯಯನ (ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳನ್ನು ಅನುಲಕ್ಷಿಸಿ)

5) ಗುಲ್ಬರ್ಗಾ ವಿಶ್ವವಿದ್ಯಾಲಯ

ಅ) ಹಸ್ತಪ್ರತಿ ಸಂಗ್ರಹಾಲಯ

ಆ) ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ

ಇ) ಹೈದ್ರಾಬಾದ ಕರ್ನಾಟಕ ಸಾಹಿತ್ಯ ಚರಿತ್ರೆ

ಈ) ಹೈದ್ರಾಬಾದ ಕರ್ನಾಟಕದ ಸಾಂಸ್ಕೃತಿಕ ಕೋಶ

6) ಮಂಗಳೂರು ವಿಶ್ವವಿದ್ಯಾಲಯ

ಅ) ಪರಿಸರ ಭಾಷೆಗಳ ಅಧ್ಯಯನ

ಆ) ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಗೆಜೆಟಿಯರ್ ರಚಿಸುವುದು

ಇ) ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಆರಾಧನೆಗಳು

ಈ) ವಿಚಾರ ಸಂಕೀರಣಗಳು / ಪ್ರಕಟಣೆಗಳು

7) ಬೆಂಗಳೂರು ವಿಶ್ವವಿದ್ಯಾಲಯ

ಅ) ಹಸ್ತಪ್ರತಿ ಮುದ್ರಣ, ಸಂರಕ್ಷಣೆ, ಪ್ರದರ್ಶನ ಮತ್ತು ವಿಚಾರಗೋಷ್ಠಿ ಏರ್ಪಡಿಸಲು

ಆ) ಆಧುನಿಕ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ ಪುಸ್ತಕ ಪ್ರಕಟಣೆ

ಇ) ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಜಾನಪದ ಆಚರಣೆಗಳ ದಾಖಲೀಕರಣ ಮತ್ತು ಪ್ರಕಟಣೆ

ಈ) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಪರಿಷ್ಕೃತ ಮುದ್ರಣ ಪ್ರಕಟಣೆಗೆ ತಗಲುವ ವೆಚ್ಚ.

8) ಕನ್ನಡ ಹಂಪಿ ವಿಶ್ವವಿದ್ಯಾಲಯ

ಅ) ಕನ್ನಡ ಭಾಷೆ ಬಳಕೆ ಸಮಸ್ಯೆಗಳು ಮತ್ತು ಸಾಧ್ಯತೆ

ಆ) ಕನ್ನಡದಲ್ಲಿ ನಾಮಫಲಕಗಳ ಅಧಿಕೃತ ರೂಪ

ಇ) ಕನ್ನಡ ದೇಶಿ ಪರಂಪರೆ (ಪ್ರಾಚೀನ–ಮಧ್ಯಕಾಲೀನ–ಸಮಕಾಲೀನ)

9) ತುಮಕೂರು ವಿಶ್ವವಿದ್ಯಾಲಯ

ಅ) ತುಮಕೂರು ಜಿಲ್ಲೆ ಸಮಗ್ರ ಅಧ್ಯಯನ

ಆ) ಜಿಲ್ಲೆಗಳ ಸ್ಥಳ ನಾಮಗಳ ಅಧ್ಯಯನ

ಇ) ವಿಚಾರ ಸಂಕೀರಣಗಳು, ಕಾರ್ಯಗಾರಗಳು

ಈ) ಅಂಕಿ–ಅಂಶಗಳ ಸಂಗ್ರಹಣೆ, ಭಾಷಾಭಿವೃದ್ಧಿಗಾಗಿ ವಿಶೇಷ ವೆಬ್‌ಸೈಟ್ ಪ್ರಾರಂಭಿಸುವುದು

10) ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ಅ) ಜನಪ್ರಿಯ ತಾಂತ್ರಿಕ ಮಾಲೆ, ಕಿರುಹೊತ್ತಿಗೆಗಳ ಪ್ರಕಟಣೆ

ಆ) ವಿಚಾರಗೋಷ್ಠಿಯಲ್ಲಿ ಮಂಡನೆಯಾದ ವಿಷಯಗಳ ಪ್ರಕಟಣೆ

ಇ) ಸಂಶೋಧನಾ ಮಾಲಿಕೆ ಮತ್ತು ಪ್ರಚಾರೋಪ ಉಪನ್ಯಾಸ ಮಾಲಿಕೆಗಳ ಪ್ರಕಟಣೆ

ಈ) ತಂತ್ರಜ್ಞಾನ ಪರಿಭಾಷಿಕ ಪದಕೋಶ ರಚಿಸುವುದು

ಉ) ತಾಂತ್ರಿಕ ಪುಸ್ತಕಗಳನ್ನು ಕನ್ನಡದಲ್ಲಿ ಅನುವಾದಿಸುವುದು

ಊ) ಕನ್ನಡದಲ್ಲಿ ತಂತ್ರಾಂಶವನ್ನು ಅಭಿವೃದ್ಧಿಗೊಳಿಸುವುದು

ಋ) ಶೈಕ್ಷಣಿಕ ಬೋಧನೆಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಗಣಕಯಂತ್ರದ ಮೂಲಕ ಅಧ್ಯಯನದ ವಿಷಯಗಳನ್ನು ಪರಿಶೀಲಿಸುವುದು

ಎ) ಕನ್ನಡ ಭಾಷೆ ಪ್ರಯೋಗಾಲಯ ಸ್ಥಾಪನೆ, ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳಿಗೆ ತರಬೇತು ಶಿಬಿರ, ಬೋಧಕ ಸಿಬ್ಬಂದಿ ವರ್ಗದವರಿಗೆ ಕಮ್ಮಟ ಮತ್ತು ಕಾರ್ಯಾಗಾರವನ್ನು ಏರ್ಪಡಿಸುವುದು

ಏ) ಕನ್ನಡಕ್ಕೆ ಸಂಬಂಧಿಸಿದ ಸಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕೀರಣ, ಗೋಷ್ಠಿ ಏರ್ಪಡಿಸುವುದು.

11) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

ಈ ಕೆಳಕಂಡ ಯೋಜನೆಗಳು ಪೂರ್ಣಗೊಂಡಿರುವುದಾಗಿ ಇಲಾಖೆಗೆ ವರದಿ ನೀಡಿರುತ್ತಾರೆ.

ಅ) ಕನ್ನಡದಲ್ಲಿ ಅನ್‌ಲೈನ್ ಶಿಕ್ಷಣ

ಆ) ಕನ್ನಡದಲ್ಲಿ ದೃಶ್ಯ-ಶ್ರವ್ಯ ಸಾಮಗ್ರಿಗಳ ನಿರ್ಮಾಣ

ಇ) ಜನಪ್ರಿಯ ಕರ್ನಾಟಕ ಮಾಲೆ

ಈ) ಮೈಸೂರು ದರ್ಶನ ವಿಶ್ವಕೋಪ

ಉ) ಕನ್ನಡ ನಾಡು-ನುಡಿ ಚಿಂತನೆ : ಶತಮಾನೋತ್ಸವ ಸಾಹಿತಿಗಳ ಸಾಧನೆ

ಊ) ಶಿಕ್ಷಣ ಶಾಸ್ತ್ರ ವಿಷಯ ವಿಶ್ವಕೋಶ

ಋ) ವಿಶೇಷ ಬಿ.ಇಡಿ/ಸಾಮಾನ್ಯ ಬಿ.ಇಡಿ ವಿದ್ಯಾರ್ಥಿಗಳಿಗೆ ದೂರ ಶಿಕ್ಷಣ ಕ್ರಮದ ಪಠ್ಯಗಳನ್ನು ಕನ್ನಡದಲ್ಲಿ ಸಿ.ಡಿ. ಮುಖಾಂತರ ಒದಗಿಸುವುದು

ಎ) ಉರ್ದು ಭಾಷಿಕ ವಿದ್ಯಾರ್ಥಿಗಳ ಕನ್ನಡ ಭಾಷಾ ಕಲಿಕೆ:ಸವಾಲುಗಳು-ಪರಿಹಾರಗಳು.

ಬೀದರ್ ಜಿಲ್ಲೆಯಲ್ಲಿ ಅರಣ್ಯ ಅಭಿವೃದ್ಧಿ

47(50) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ ಜಿಲ್ಲೆಯ ವಿವಿಧ ಮತ ಕ್ಷೇತ್ರಗಳಿಗೆ ಕಳೆದ 3 ವರ್ಷಗಳಲ್ಲಿ ಅರಣ್ಯ ಅಭಿವೃದ್ಧಿಗಾಗಿ ಪ್ರತಿ ವರ್ಷ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; (ಕ್ಷೇತ್ರವಾರು ವಿವರ ಒದಗಿಸಿ)

ಆ) ಈ ಅವಧಿಯಲ್ಲಿ ಜಿಲ್ಲೆಯ ಪ್ರತಿ ಮತ ಕ್ಷೇತ್ರದಲ್ಲಿ ಯಾವ ರೀತಿ ಅರಣ್ಯ ಬೆಳೆಸುವ ಕಾರ್ಯದಲ್ಲಿ ಪ್ರಗತಿ ಸಾಧಿಸಲಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಪ್ರತಿ ಮತ ಕ್ಷೇತ್ರದಲ್ಲಿ ಯಾವ ಯಾವ ಯೋಜನೆಗಳು ಕಾರ್ಯಗತವಾಗುತ್ತಿವೆ; ಇದಕ್ಕಾಗಿ ಪ್ರತಿ ಮತ ಕ್ಷೇತ್ರಕ್ಕೆ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಸಚಿವರು)